# ಬಲ್ಲಿರೇನಯ್ಯಾ..?

ಯಕ್ಷಗಾನದ ದಂತ ಕಥೆ, ಪದ್ಮಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆಯವರು ಈಗ ನೆನಪು ಮಾತ್ರ. ಹೊನ್ನಾವರ ತಾಲೂಕಿನ ಗುಡೇಕೇರಿಯಲ್ಲಿರುವ ಚಿಟ್ಟಾಣಿಯವರ ಮನೆಗೆ ಹೋದಾಗ ಅವರ ಮನೆಯ ಪ್ರಧಾನ ಬಾಗಿಲು ನಮ್ಮನ್ನು ಆಕರ್ಷಿಸುತ್ತದೆ. ಕಿರೀಟ ವೇಷಧಾರಿಯಾಗಿ ಸ್ವತಃ ಚಿಟ್ಟಾಣಿಯವರೇ ರಂಗಸ್ಥಳಕ್ಕೆ ಬಂದರೇನೂ ಎನಿಸುವ ಕೆತ್ತನೆ ಒಮ್ಮೆ ಮೈಮರೆಯುವಂತೆ ಮಾಡುತ್ತದೆ. ಬಲ್ಲಿರೇನಯ್ಯಾ..? ಎನ್ನುತ್ತ ರಂಗಸ್ಥಳಕ್ಕೆ ಚಿಟ್ಟಾಣಿಯವರು ಮತ್ತೆ ಬಂದರೇನೋ ಎಂದು ಕನಸು ಕಾಣುವಂತೆ ಮಾಡುತ್ತದೆ. ಈ ಕೆತ್ತನೆಯನ್ನು ಮಾಡಿದ ಚಿಟ್ಟಾಣಿಯವರ ಅಭಿಮಾನಿ ಕೆತ್ತನೆ ಕಲಾವಿದ ಕೊಂಡಾಳಿಯ ದಿ.ಚಂದ್ರಹಾಸ ಆಚಾರಿಯವರಿಗೆ ಒಂದು ಸಲಾಂ ಹೇಳಲೇ ಬೇಕು.

**-ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ**



# ನಾಡದೇವಿಗೆ 25 ಮುಖಗಳು!

ವಿಜಯಪುರದ ಜೋರಾಪುರ ಪೇಟೆಯಲ್ಲಿರುವ ಈ ವಿಶ್ವರೂಪಿಣಿ ನಾಡದೇವಿಗೆ 25 ಮುಖಗಳು, 50 ಬಾಹುಗಳು. ಇದು ಸೊಲ್ಲಾಪುರದ ಕಲಾವಿದ ಜ್ಞಾನೇಶ್ವರ ಗಾಜೂರವರ ಕಲಾಸೃಷ್ಟಿ. ನಾಡದೇವಿ ಚಾಮುಂಡಿಯು ಇಲ್ಲಿರುವ 10 ಅಡಿ ಎತ್ತರದ ಗುಡ್ಡದ ಮೇಲೆ ಪವಡಿಸಿದ್ದಾಳೆ. 25 ಅಡಿ ಎತ್ತರ ಹಾಗೂ 14 ಅಡಿ ಅಗಲದ ಈ ಮಹಾನ್ ಕಲಾಕೃತಿಯ ತೂಕ ಸುಮಾರು 1 ಟನ್. ಜ್ಞಾನೇಶ್ವರ ನೇತೃತ್ವದ ಕಲಾತಂಡ ಈ ಬೃಹತ್ ಕೃತಿಯ ನಿರ್ಮಾಣಕ್ಕೆ ನಿರಂತರವಾಗಿ 20 ದಿನಗಳ ಕಾಲ ಶ್ರಮಿಸಿದೆ. ಕಳೆದ 40 ವರ್ಷಗಳಿಂದ ಶ್ರೀ ಶಕ್ತಿ ತರುಣ ಸಂಘ ಇಂತಹ ಹೊಸ ಹೊಸ ಕಲ್ಪನೆಗಳಿಗೆ ಇಂಬುಗೊಡುತ್ತಲೇ ಬಂದಿದೆ.

**-ಸುಭಾಸ ಯಾದವಾಡ, ವಿಜಯಪುರ**





# ಭೀಮನ ಬುಗುರಿ

ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಶಿವನಾಳ ಊರಿನ ಕಾಡಿನಲ್ಲಿ ಬುಗುರಿಯಾಕಾರದ ಬೃಹತ್ ಬಂಡೆಯೊಂದು ಸ್ಥಳೀಯ ಪ್ರವಾಸಿಗರ ಗಮನ ಸೆಳೆಯುತ್ತಿದೆ. ದ್ವಾಪರ ಯುಗದಲ್ಲಿ ಪಾಂಡವರು ತಮ್ಮ ವನವಾಸದ ಕಾಲವನ್ನು ಇಲ್ಲಿ ಕಳೆದಿದ್ದರು. ಆಗ ಭೀಮನು ಕಲ್ಲಿನಿಂದ ಬುಗುರಿ ತಯಾರಿಸಿ ಆಡುತ್ತಿದ್ದ ಎಂಬ ಐತಿಹ್ಯ ಇಲ್ಲಿನವರಲ್ಲಿ ಪ್ರಚಲಿತವಿದೆ. ವಿಸ್ತಾರವಾದ ಹಾಸುಗಲ್ಲಿನ ಮೇಲೆ ನಿಂತಿರುವ ಈ ಆಕರ್ಷಕ ಬಂಡೆ ಈ ಭಾಗದಲ್ಲಿ 'ಭೀಮನ ಬುಗುರಿ ಕಲ್ಲು' ಎಂದೇ ಹೆಸರಾಗಿದೆ.

**-ಜಿ.ಪ್ರೇಮಾನಂದ, ಅಂಕೋಲ**